# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **1115** |
| ಸದಸ್ಯರ ಹೆಸರು | ಶ್ರೀ. ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವವರು | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 13-03-2020 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಸಂಖ್ಯೆ ಎಷ್ಟು; | ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ವಿವರ ಕೆಳಗಿನಂತಿವೆ:-<br>1. ಅಂಗನವಾಡಿ ಕಾರ್ಯಕರ್ತೆಯರು – 62580<br>2. ಮಿನಿ ಅಂಗನವಾಡಿ ಕೇಂದ್ರದ ಕಾರ್ಯಕರ್ತೆಯರು – 3331<br>3. ಅಂಗನವಾಡಿ ಸಹಾಯಕಿಯರು – 62580 |
| ಆ. | ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಪ್ರಸ್ತುತ ನೀಡುತ್ತಿರುವ ಮಾಸಿಕ ಗೌರವಧನವೆಷ್ಟು; (ರಾಜ್ಯ ಹಾಗೂ ಕೇಂದ್ರ ಸರ್ಕಾರದ ಪಾಲಿನ ಅನುದಾನದ ಮೊತ್ತವೆಷ್ಟು) | ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಈ ಕೆಳಕಂಡಂತೆ ಮಾಸಿಕ ಗೌರವಧನ ನೀಡಲಾಗುತ್ತಿದೆ.<br>(ಕೆಳಗಿನ ಕೋಷ್ಟಕ ನೋಡಿ)<br>ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಪಾಲು ಕ್ರಮವಾಗಿ 60:40 ಆಗಿರುತ್ತದೆ. |
| ಇ. | ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಕರ್ತವ್ಯಗಳೇನು; (ವಿವರ ನೀಡುವುದು) | ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಕರ್ತವ್ಯಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಈ | ಸದರಿಯವರಿಗೆ ಗೌರವಧನ ಪರಿಷ್ಕರಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಈಗಾಗಲೇ ಕೇಂದ್ರ ಸರ್ಕಾರವು ದಿನಾಂಕ:01.10.2018 ರಿಂದ ಹಾಗೂ ರಾಜ್ಯ ಸರ್ಕಾರವು ದಿನಾಂಕ:01.11.2019 ರಿಂದ ಅನ್ವಯವಾಗುವಂತೆ ಗೌರವಧನವನ್ನು ಪರಿಷ್ಕರಿಸಿರುತ್ತದೆ. |

(ಆ. ಉತ್ತರದ ಕೋಷ್ಟಕ)

| ಕ್ರ.ಸ | ವಿವರ | ಕೇಂದ್ರ | ರಾಜ್ಯ | ಒಟ್ಟು |
|---|---|---|---|---|
| 1 | ಅಂಗನವಾಡಿ ಕಾರ್ಯಕರ್ತೆಯರು | 4500 | 5500 | 10000 |
| 2 | ಮಿನಿ ಅಂಗನವಾಡಿ ಕೇಂದ್ರದ ಕಾರ್ಯಕರ್ತೆಯರು | 3500 | 2750 | 6250 |
| 3 | ಅಂಗನವಾಡಿ ಸಹಾಯಕಿಯರು | 2500 | 2750 | 5250 |

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ,
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ : ಮಮಇ 65 ಐಸಿಡಿ 2020

ಅನುಬಂಧ

## ಅಂಗನವಾಡಿ ಕಾರ್ಯಕರ್ತೆಯರ ಕರ್ತವ್ಯದ ಹಂಚಿಕೆ

1. ಜನಸಮುದಾಯದ ಸಮೀಕ್ಷೆ ಕೈಗೊಂಡು, ಸಹಾಯ ಅಗತ್ಯವಿರುವಂತಹವರ ವಿವರ ಸಂಗ್ರಹಿಸುವುದು, ಆರು ವರ್ಷದ ಒಳಗಿನ ಮಕ್ಕಳ ಸಂಖ್ಯೆ, ಗರ್ಭಿಣಿ ಮತ್ತು ಬಾಣಂತಿಯರ ಮಾಹಿತಿ ಸಂಗ್ರಹಿಸುವುದು, ಕುಟುಂಬಗಳ ಸಂಖ್ಯೆ, ಕುಟುಂಬದ ಸದಸ್ಯರ ಸಂಖ್ಯೆ ಮತ್ತು ಕುಟುಂಬದ ಆದಾಯ ಇವುಗಳನ್ನು ಸಂಗ್ರಹಿಸುವುದು. ಮುಖ್ಯ ಅಂಕಿ ಅಂಶಗಳಾದ ಜನನ ಮತ್ತು ಮರಣ ದಾಖಲೆಗಳನ್ನಿಡುವುದು.
2. 3 – 6 ವರ್ಷಗಳ ನಡುವಣ ಮಕ್ಕಳ ಶಾಲಾಪೂರ್ವ ಶಿಕ್ಷಣವನ್ನು ಕೈಗೊಳ್ಳುವುದು.
3. 0 – 6 ವರ್ಷಗಳ ನಡುವಣ ಮಕ್ಕಳಿಗೆ, ಗರ್ಭಿಣಿ ಮತ್ತು ಬಾಣಂತಿಯರಿಗೆ ಹಾಗೂ ಕಿಶೋರಿಯರಿಗೆ ಅಧಿಕ ಪೋಷಕಾಂಶ ( ಪೂರಕ ಪೌಷ್ಟಿಕ ಆಹಾರ)ಒದಗಿಸುವುದು.
4. ಪ್ರಾಥಮಿಕ ಆರೋಗ್ಯ ಹಾಗೂ ಪ್ರಥಮ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸುವುದು. ರೋಗನಿರೋಧಕ ಚುಚ್ಚುಮದ್ದು ಮತ್ತು ಆರೋಗ್ಯ ತಪಾಸಣೆ ಮಾಡುವಲ್ಲಿ ಆರೋಗ್ಯ ಸಿಬ್ಬಂದಿಗೆ ಸಹಾಯ ಮಾಡುವುದು.
5. ಪ್ರಬಲವಾಗಿ ನ್ಯೂನಪೋಷಣೆಗೊಳಗಾದ, ಪೋಷಕಾಂಶದ ಅಗತ್ಯವುಳ್ಳ ಅನಾರೋಗ್ಯವುಂಟಾದ, ಅಪಾಯದಲ್ಲಿರುವ ಮಕ್ಕಳನ್ನು, ಅಂಟು ರೋಗ ಇರುವವರನ್ನು ತಜ್ಞ ವೈದ್ಯರಲ್ಲಿಗೆ ಕಳುಹಿಸಬೇಕು.
6. ಅಂಗನವಾಡಿ ಕೇಂದ್ರಕ್ಕೆ ಬರುವ ಗರ್ಭಿಣಿ ಮತ್ತು ಬಾಣಂತಿಯರಿಗೆ, ಅಂಗನವಾಡಿ ಕಾರ್ಯಕರ್ತೆಯರು , ಮನೆ ಭೇಟಿ ಸಮಯದಲ್ಲಿ ಮತ್ತು ಶಿಕ್ಷಣ ಕಾರ್ಯಕ್ರಮದಲ್ಲಿ ಆರೋಗ್ಯ ಮತ್ತು ಪೋಷಣೆಗೆ ಸಂಬಂಧಿಸಿದ ತಿಳುವಳಿಕೆ ನೀಡಬೇಕು.
7. ನಿಗದಿಪಡಿಸಿರುವ ರಿಜಿಸ್ಟರುಗಳನ್ನು ಮತ್ತು ದಾಖಲೆಗಳನ್ನು ನಿರ್ವಹಿಸುವುದು.
8. ಗ್ರಾಮದಲ್ಲಿರುವ ಪಂಚಾಯಿತಿ, ಮಹಿಳಾಮಂಡಲ ಮುಂತಾದ ಸಂಸ್ಥೆಗಳೊಂದಿಗೆ ಹಾಗು ಶಾಲಾ ಶಿಕ್ಷಕರು, ದಾದಿ ಮುಂತಾದ ವ್ಯಕ್ತಿಗಳೊಡನೆ ಸಂಪರ್ಕ ಇಟ್ಟುಕೊಂಡು ಕಾರ್ಯಕ್ರಮದ ಯಶಸ್ವಿಗೆ ಅವರ ಸಹಕಾರ, ಸಹಭಾಗಿತ್ವವನ್ನು ಕೋರುವುದು.
9. ಇಲಾಖೆಯು ನಿಗದಿಪಡಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿವುದು.
10. ಅಂಗನವಾಡಿಗೆ ಬರುವ ಮಕ್ಕಳ ತಂದೆ-ತಾಯಿಯರ, ಪೋಷಕರ ಸಭೆ ಏರ್ಪಡಿಸಿ ಅಂಗನವಾಡಿ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವ ಬಗ್ಗೆ ಮಾಹಿತಿ ನೀಡುವುದು.

## ಅಂಗನವಾಡಿ ಸಹಾಯಕಿಯರ ಕರ್ತವ್ಯದ ಹಂಚಿಕೆ

ಅಂಗನವಾಡಿ ಸಹಾಯಕಿಯು ಅಡಿಗೆ ಮಾಡಿ ಮಕ್ಕಳಿಗೆ ಬಡಿಸಬೇಕು,ಅಂಗನವಾಡಿ ಆವರಣವನ್ನು ಪ್ರತಿನಿತ್ಯ ಸ್ವಚ್ಛಗೊಳಿಸಬೇಕು,ಅಂಗನವಾಡಿಗೆ ನೀರು ತರುವುದು, ಅಂಗನವಾಡಿಗೆ ಮಕ್ಕಳನ್ನು ಕರೆತರುವುದು ಹಾಗೂ ಅಂಗನವಾಡಿ ಮಕ್ಕಳನ್ನು ಸ್ವಚ್ಛವಾಗಿರಿಸುವುದು.